ಹುಲಸೂರು ವಿಧಾನಸಭಾ ಕ್ಷೇತ್ರದಲ್ಲಿ ಹೊಸ ಪ್ರೌಢಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳ ಪ್ರಾರಂಭ

2599(3141) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಹುಲಸೂರು ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; ಈ ಮತಕ್ಷೇತ್ರದಲ್ಲಿ ಅಗತ್ಯಕ್ಕೆ ತಕ್ಕ ಪ್ರಮಾಣದಲ್ಲಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಸೌಲಬ್ಯಗಳಿಲ್ಲದೇ ಇರುವುದರಿಂದ ಈ ಭಾಗದಲ್ಲಿನ ವಿದ್ಯಾರ್ಥಿಗಳು ದೂರದ ಬಸವಕಲ್ಯಾಣ ಹಾಗೂ ಬೀದರ್‌ಗೆ ಹೋಗುವ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

2) ಹಾಗಿದ್ದಲ್ಲಿ, ಈ ಮತಕ್ಷೇತ್ರದಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರವು ಪರಿಶೀಲನೆ ಮಾಡುವುದೇ; ಈ ವಿಷಯದಲ್ಲಿ ಸರ್ಕಾರದ ಮುಂದೆ ಎಷ್ಟು ಪ್ರಸ್ತಾವನೆಗಳು ಮಂಜೂರಾತಿಗಾಗಿ ಬಾಕಿ ಇದೆ. ಈ ವಿಷಯದಲ್ಲಿ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುವುದು.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1) ಒಟ್ಟು ಪ್ರೌಢಶಾಲೆಗಳು	-	20	
ಸರ್ಕಾರಿ ಪ್ರೌಢಶಾಲೆಗಳು	-	11	
ಅನುದಾನಿತ	-	6	
ಅನುದಾನ ರಹಿತ	-	7	
ಪದವಿಪೂರ್ವ ಕಾಲೇಜುಗಳ		-	2
ಸರ್ಕಾರಿ - 1 ಖಾಸಗಿ - 1			

2) ಹುಲಸೂರು ಮತಕ್ಷೇತ್ರದಲ್ಲಿ ಯಾವುದೇ ಪ್ರೌಢ ಶಾಲೆ ಅಥವಾ ಪದವಿಪೂರ್ವ ಶಾಲೆ ತೆರೆಯಲು ಪ್ರಸ್ತಾವನೆ ಬಂದಿರುವುದಿಲ್ಲ.